OS No. 22/2017
CW-1

(ಇಂದು ದಿನಾಂಕಃ 11-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ K.R ವಕೀಲರಿಂದಃ**

ನಿ.ಪಿ-16 ಸಂಪೂರ್ಣ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿ.ಪಿ-16 ರಲ್ಲಿ ಪುಟಗಳ ಸಂಖ್ಯೆ 1 ಎಂದು ಎರಡು ಕಡೆ ಒಂದೇ ಇರುತ್ತದೆ ಎಂದರೆ ಸರಿ. ಆದರೆ ಭಾಗ ಸಂಖ್ಯೆ ಬೇರೆ ಇರುತ್ತದೆ. ನಿ.ಪಿ-16 ರಲ್ಲಿ ಪುಟ ಸಂಖ್ಯೆ 1ರ ನಂತರ ಪುಟ ಸಂಖ್ಯೆ 4 ಇದೆ ಎಂದರೆ ಸರಿ. ಅವರ ಹೆಸರು ಪುಟ ಸಂಖ್ಯೆ 4 ರಲ್ಲಿ ಇರುವುದರಿಂದ ಅದನ್ನು ಮಾತ್ರ ನೀಡಿರುತ್ತೇನೆ. ಪುಟ ಸಂಖ್ಯೆ 2 ಮತ್ತು 3 ಮನವಿ ಮಾಡಿಕೊಂಡವರ ಅಗತ್ಯ ದಾಖಲಾತಿ ಇಲ್ಲದ ಕಾರಣ ಅದನ್ನು ನೀಡಿರುವುದಿಲ್ಲ. ನಿ.ಪಿ-4 ರಲ್ಲಿ ಬರೆದ ಒಕ್ಕಣಿಕೆಗಳು ಸರಿಯಾಗಿವೆ ಎಂದರೆ ಸರಿ. ಒಟ್ಟು ಮತದಾರರ ಸಂಖ್ಯೆ 1043 ಇರುತ್ತದೆ ಎಂದರೆ ಸರಿ. ಆದರೆ ವಾದಿ ನಂಬರ 1 ಮತ್ತು ಮೃತ ವಾದಿ ನಂಬರ 3 ರವರ ಮತದಾರರ ಸಂಖ್ಯೆ 1045, 1046 ಏಕೆ ಬಂದಿರುತ್ತದೆ ಎಂದರೆ ಕಡೆಯ ಗಳಿಗೆಯಲ್ಲಿ ಹೆಚ್ಚಿ ನ ಮತದಾರರ ಸಂಖ್ಯೆಗಳು ಸೇರಿಕೊಂಡಿರುತ್ತವೆ. ಹೆಚ್ಚಿ ನ ಮತದಾರರ ಸಂಖ್ಯೆಗಳು ಸೇರಿಕೊಂಡಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರೊಂದಿಗೆ ಮಿಲಾಪೆಯಾಗಿ ಸುಳ್ಳು ದಾಖಲಾತಿಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮತದಾರರ ಪಟ್ಟಿ ಮತ್ತು ಅವರ ಹೆಸರುಗಳನ್ನು ನೊಂದಣಿ ಮಾಡಲು ನೀಡಿದ ದಾಖಲೆಗಳನ್ನು ನೀಡುವಂತೆ ಆದೇಶವಿದ್ದರೂ ಅವುಗಳನ್ನು ನೀಡಿಲ್ಲ ಎಂದರೆ ಪ್ರತಿ ಮೂರು ವರ್ಷಕ್ಕೊಮ್ಮೆ ಹಳೆಯ ನೋಂದಣಿಯ ದಾಖಲಾತಿಗಳನ್ನು ನಾಶಪಡಿಸುತ್ತೇವೆ, ಆ ಕಾರಣದಿಂದ ನೀಡಿರುವುದಿಲ್ಲ.

**ಪಾಟೀ ಸವಾಲುಃ ವಾದಿ ಪರ ಶ್ರೀ SGJ ವಕೀಲರಿಂದಃ**

ನಿ.ಪಿ-16 ರಂತೆ ನೀಡಿದ ದಾಖಲಾತಿಗಳು ನಮ್ಮ ಕಛೇಯಲ್ಲಿ ಇದ್ದರೆ ಮಾತ್ರ ನೀಡುತ್ತೇವೆ ಎಂದರೆ ಸರಿ. ನಾವು ಮೂಲ ದಾಖಲಾತಿಗಳನ್ನು ನೋಡಿ ಅವುಗಳ ದೃಢೀಕೃತ ಪ್ರತಿಗಳನ್ನು ನೀಡುತ್ತೇವೆ ಎಂದರೆ ಸರಿ.

OS No. 22/2017
CW-1

**<u>ಮರು ವಿಚಾರಣೆ ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.